ಹೋಗುತ್ತಾರೆ, ಯಾರನ್ನು ಭೇಟಿ ಮಾಡಿದರು ಎಂಬುದು ಸ್ವತಃ ರಾಜ್ಯ ನಾಯಕರಿಗೆ ಗೊತ್ತಿರಲಿಲ್ಲ. ಇದರಿಂದಾಗಿ ಪಕ್ಷದಲ್ಲಿ ಒಮ್ಮತವಿಲ್ಲದೆ ಭಿನ್ನಮತ, ಮುನಿಸು ಹೊಗೆಯಾಡುತ್ತಿತ್ತು. ಆ ಹೊತ್ತಿನಲ್ಲಿ, ದಿಗ್ವಿಜಯಸಿಂಗ್ ಬದಲಾಯಿಸಿ, ರಾಜ್ಯ ಉಸ್ತುವಾರಿಯಾಗಿ, ಕೇಡರ್ ಆಧಾರಿತ ಸಂಘಟನೆಯಲ್ಲಿ ಸಿದ್ಧಹಸ್ತರಾದ ಕೆ.ಸಿ. ವೇಣುಗೋಪಾಲ್ ಅವರನ್ನು ನೇಮಿಸಿದ್ದು, ಮಹತ್ತರ ಬದಲಾವಣೆ.

ಬಿಜೆಪಿಯಲ್ಲಿ ಕೂಡ ಇಂತಹದೇ ವಾತಾವರಣ ಇತ್ತು. ಯಡಿಯೂರಪ್ಪ ಸರ್ವಾಧಿಕಾರಿ ಧೋರಣೆ ವಿರೋಧಿಸಿ ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಪಕ್ಷದ ನಾಯಕರಿಗೆ ತಲೆನೋವಾಗಿತ್ತು. ಆ ಹೊತ್ತಿನಲ್ಲಿ ಮಧ್ಯ ಪ್ರವೇಶಿಸಿದ ಅಮಿತ್ ಷಾ, ಇಬ್ಬರ ಮಧ್ಯೆ ಸಂಧಾನ ನಡೆಸಿ ಬ್ರಿಗೇಡ್ ಚಟುವಟಿಕೆಗೆ ಕಡಿವಾಣ ಹಾಕಿದರು. ಜೂನ್ ಬಳಿಕ ಬ್ರಿಗೇಡ್ ಬರ್ಖಾಸ್ತ್ ಆಯಿತು. ರಾಜ್ಯ ಉಸ್ತುವಾರಿಯಾಗಿರುವ ಮುರುಳೀಧರರಾವ್ ಅವರಿಂದ ಸಂಘಟನೆ ಬಲಿಷ್ಠವಾಗುವುದು ಅಸಾಧ್ಯ ಎಂದರಿತ ಷಾ, ಚುನಾವಣಾ ಉಸ್ತುವಾರಿಗಳಾಗಿ ಕೇಂದ್ರ ಸಚಿವರಾದ, ತಂತ್ರಗಾರಿಕೆ ಹೆಣೆಯುವುದರಲ್ಲಿ ನಿಸ್ಸೀಮರಾದ ಪ್ರಕಾಶ್ ಜಾವಡೇಕರ್ ಹಾಗೂ ಪೀಯೂಷ್ ಗೋಯಲ್ ಅವರನ್ನು ಷಾ ನಿಯುಕ್ತಿಗೊಳಿಸಿದರು.

## ‘ಧರ್ಮ’ ಕಾರಣ

ಇಡೀ ವರ್ಷ ರಾಜ್ಯಕಾರಣದಲ್ಲಿ ಪ್ರತಿನಿತ್ಯವೂ ಚರ್ಚೆಯ ವಸ್ತುವಾಗಿರುವುದು ವೀರಶೈವ– ಲಿಂಗಾಯತ ಸ್ವತಂತ್ರ ಧರ್ಮ. ಬಹುಸೂಕ್ಷ್ಮವಾದ ರಾಜಕೀಯ ನಡೆಗಳು, ಹಿಂದೂ ಅಥವಾ ವೈದಿಕ ಧರ್ಮದ ಕ್ರೂರ ಜಾತಿವ್ಯವಸ್ಥೆ, ಶೋಷಣೆಯನ್ನು ತೊಲಗಿಸುವ ಉದ್ದೇಶದಿಂದಲೇ ಹುಟ್ಟಿಕೊಂಡ ಲಿಂಗಾಯತ ಧರ್ಮದ ಅಸ್ಮಿತೆ, ಸಾಂಸ್ಕೃತಿಕ ಚರಿತ್ರೆಯನ್ನು ಮರುಸ್ಥಾಪಿಸುವ ಐತಿಹಾಸಿಕ ಸಂಕಲ್ಪ ಬಲ ಕೂಡ ಇದರ ಹಿಂದೆ ಇರುವುದು ದಿಟ.

ವೀರಶೈವ– ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಬೇಕು ಎಂಬ ಬೇಡಿಕೆಗೆ ಮೂರು ದಶಕಗಳ ಇತಿಹಾಸವಿದೆ. ಆದರೆ, ಈ ಬೇಡಿಕೆ ಮುನ್ನೆಲೆಗೆ ಬಂದಿರುವುದರ ಹಿಂದೆ ತಕ್ಷಣದ ಕಾರಣವೂ ಇದೆ.

ವಿಜಯಪುರ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಹೆಸರಿಟ್ಟಿರುವುದು, ಬಸವಣ್ಣನವರ ಭಾವಚಿತ್ರವನ್ನು ಎಲ್ಲ ಸರ್ಕಾರಿ ಕಚೇರಿಗಳಲ್ಲೂ ಕಡ್ಡಾಯಗೊಳಿಸಿರುವ ತೀರ್ಮಾನ ಕೈಗೊಂಡ ಸಿದ್ದರಾಮಯ್ಯನವರನ್ನು ಸನ್ಮಾನಿಸಲು ಅಖಿಲ ಭಾರತ ವೀರಶೈವ ಮಹಾಸಭಾ ಅಭಿನಂದನಾ ಸಮಾರಂಭ ಹಮ್ಮಿಕೊಂಡಿತ್ತು. ಕಾಂಗ್ರೆಸ್ ಶಾಸಕ ಶ್ಯಾಮನೂರು ಶಿವಶಂಕರಪ್ಪ, ಪೌರಾಡಳಿತ ಸಚಿವ ಈಶ್ವರ ಖಂಡ್ರೆ ಮಹಾಸಭಾದ ಪ್ರಮುಖರೆಂಬುದು ಇಲ್ಲಿ ಉಲ್ಲೇಖಾರ್ಹ. ಈ ಸಮಾರಂಭದಲ್ಲಿ ಸಿದ್ದರಾಮಯ್ಯಗೆ ಸಲ್ಲಿಸಿದ ಭಿನ್ನವತ್ತಳೆಯಲ್ಲಿ ವೀರಶೈವ– ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡುವಂತೆ ಒತ್ತಾಯಿಸಲಾಯಿತು.

ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ವೀರ ಸೋಮೇಶ್ವರ ಸ್ವಾಮೀಜಿ ಸೇರಿದಂತೆ ಪಂಚಪೀಠಾಧಿಪತಿಗಳು ವೀರಶೈವ ಎಂಬುದು ಹಿಂದೂ ಧರ್ಮದ ಭಾಗವೇ ವಿನಃ ಪ್ರತ್ಯೇಕ ಧರ್ಮವಲ್ಲ ಎಂದು ಪ್ರತಿಪಾದಿಸಿ ಮಹಾಸಭಾದ ನಿಲುವಿಗೆ ಭಿನ್ನ ಧೋರಣೆ ತಳೆದರು. ಇತ್ತ ನಾಗನೂರು ರುದ್ರಾಕ್ಷಿ ಮಠ, ಗದಗ ತೋಂಟದಾರ್ಯ ಮಠ, ಚಿತ್ರದುರ್ಗದ ಮುರುಘಾಮಠ ಸೇರಿದಂತೆ ವಿರಕ್ತ ಪರಂಪರೆಯ ಮಠದ ಪ್ರಮುಖರು ವೀರಶೈವ ಪದ ಬಿಟ್ಟು, ಬಸವಣ್ಣನವರು ಪ್ರತಿಪಾದಿಸಿದ ಲಿಂಗಾಯತ ಹೆಸರಿನಲ್ಲೇ ಪ್ರತ್ಯೇಕ ಧರ್ಮ ಆಗಬೇಕು. ಪಂಚಪೀಠಗಳನ್ನು ಹೊರಗಿಡಬೇಕು ಎಂದು ಬೇಡಿಕೆ ಮುಂದೊಡ್ಡಿದರು. ಇದು ಭಾರಿ ಚರ್ಚೆಗೆ ಕಾರಣವಾಯಿತು.

ಅದೇ ಹೊತ್ತಿಗೆ, ಕಾಂಗ್ರೆಸ್ ಸರ್ಕಾರದ ಸಚಿವರಾಗಿರುವ ಎಂ.ಬಿ. ಪಾಟೀಲ, ವಿನಯ ಕುಲಕರ್ಣಿ ಮುಂಚೂಣಿಯಲ್ಲಿ ನಿಂತು ಸ್ವತಂತ್ರ ಲಿಂಗಾಯತ ಧರ್ಮ ವೇದಿಕೆ ರಚನೆಗೆ ಅಡಿಪಾಯ ಹಾಕಿದರು. ನಿವೃತ್ತ ಐಎಎಸ್ ಅಧಿಕಾರಿ ಶಿವಾನಂದ ಎಂ ಜಾಮದಾರ ತಾತ್ವಿಕ ನೆಲೆಯನ್ನೂ ಕಲ್ಪಿಸಿದರು. ಸಚಿವರಾಗಿರುವ ಬಸವರಾಜ ರಾಯರಡ್ಡಿ, ಶರಣ ಪ್ರಕಾಶ ಪಾಟೀಲ ಮತ್ತಿತರರು ಇದಕ್ಕೆ ಜತೆಯಾದರು. ರಾಜ್ಯದ ವಿವಿಧ ಭಾಗಗಳಲ್ಲಿ ಮಾತ್ರವಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಕೂಡ ಲಿಂಗಾಯತ ಸ್ವತಂತ್ರ ಧರ್ಮದ ಹಕ್ಕೊತ್ತಾಯ ಮಂಡಿಸಿ ಸಮಾವೇಶ ನಡೆಯಿತು. ಜೆಡಿಎಸ್ ನಾಯಕರಾದ ಬಸವರಾಜ ಹೊರಟ್ಟಿ ಕೂಡ ಇದರಲ್ಲಿ ತೊಡಗಿಸಿಕೊಂಡರು.

ಇತ್ತ ಹಿಂದೂ ಮತಗಳ ಕ್ರೋಡೀಕರಣಕ್ಕಾಗಿಯೇ ಇರುವಂತಿರುವ ಧರ್ಮಸಂಸತ್ ನ 12ನೇ ಸಮಾವೇಶ ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿ ಸಮ್ಮುಖದಲ್ಲಿ ಉಡುಪಿಯಲ್ಲಿ ನಡೆಯಿತು. 2019ರೊಳಗೆ ರಾಮಮಂದಿರ ನಿರ್ಮಾಣ ಆಗಬೇಕು, ದಲಿತರಿಗೆ ದೇವಸ್ಥಾನ ಪ್ರವೇಶ ನೀಡಬೇಕು ಎಂಬ ಪ್ರಮುಖ ನಿರ್ಣಯಗಳನ್ನು ಧರ್ಮ ಸಂಸತ್ ಕೈಗೊಂಡಿತು. ಡಾ.ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನಕ್ಕೆ ಬದಲಾವಣೆ ತರಬೇಕು ಎಂಬ ಪೇಜಾವರ ಶ್ರೀಗಳ ಹೇಳಿಕೆ ಭಾರಿ ಚರ್ಚೆ, ಗದ್ದಲ ಸೃಷ್ಟಿಸಿತು. ಅಲ್ಪಸಂಖ್ಯಾತರಿಗೆ ಸಿಗುತ್ತಿರುವ ಸೌಲಭ್ಯ ಬಹುಸಂಖ್ಯಾತರಿಗೂ ಸಿಗುವಂತೆ ತಿದ್ದುಪಡಿ ತರಬೇಕು ಎಂದು ಹೇಳಿದ್ದಾಗಿ ಪೇಜಾವರ ಶ್ರೀಗಳು ಬಳಿಕ ಸ್ಪಷ್ಟನೆ ನೀಡಿದ್ದೂ ಆಯಿತು.

## ಸಾಹಿತ್ಯ ಕಾರಣ

ಮೈಸೂರಿನಲ್ಲಿ ನಡೆದ 83ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವಕ್ಕೆ ಪಾತ್ರರಾಗಿದ್ದ, ಮಾಜಿ ಬಂಡಾಯ ಕವಿ, ನಾಟಕಕಾರ ಪ್ರೊ. ಚಂದ್ರಶೇಖರ ಪಾಟೀಲ(ಚಂಪಾ)ರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ‘ಮುಂದಿನ ಚುನಾವಣೆಯಲ್ಲಿ ಜಾತ್ಯತೀತ ಪಕ್ಷಗಳನ್ನು ಬೆಂಬಲಿಸಿ’ ಎಂದು ಹೇಳಿದ್ದರು.

ಜಾತ್ಯತೀತ ಎಂಬುದನ್ನು ಕಾಂಗ್ರೆಸ್ ಎಂದು ಅರ್ಥೈಸಿಕೊಂಡ ಬಿಜೆಪಿ ನಾಯಕರು ಚಂಪಾ ವಿರುದ್ಧ ತಿರುಗಿಬಿದ್ದರು. ವೇದಿಕೆಯಲ್ಲಿಯೇ ಅದನ್ನು ಟೀಕಿಸಿದರು. ಅದಕ್ಕೆ ಚಂಪಾ ಕೂಡ ತಿರುಗೇಟು ಕೊಟ್ಟರು.

ಸಮ್ಮೇಳನವೊಂದು ಹೊಸ ವಾಗ್ವಾದವನ್ನು, ಆರೋಗ್ಯಕರ ಚರ್ಚೆಯನ್ನು ಸೃಜಿಸದೇ ಹೋದರೆ ಅದು ಜಾತ್ರೆಗೆ ಸೀಮಿತವಾಗಿ ಬಿಡುತ್ತದೆ ಎಂಬ ವಾದ



ಮಹದಾಯಿ: ಹೋರಾಟಕ್ಕೆ ಪ್ರತಿಫಲ ಸಿಕ್ಕೀತೇ?